ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

Phone - 080 26980100
Fax - 080 26422377

ಡಿಎಸ್ಇಆರ್‌ಟಿ DSERT

ಸಂಖ್ಯೆ: E- 8146 DSERT/EVG/KAKC/ ಸಂಭ್ರಮ ಶನಿವಾರ/24/2024 ದಿನಾಂಕ: 19-02-2025

**ಜ್ಞಾಪನಾ**

ವಿಷಯ: ಶಾಲೆಗಳಲ್ಲಿ 10 Bag less Days ಅನುಷ್ಠಾನಕ್ಕಾಗಿ NCERT ಅಭಿವೃದ್ಧಿ ಪಡಿಸಿರುವ ಮಾರ್ಗಸೂಚಿಯನ್ವಯ ಕ್ರಮವಹಿಸುವ ಕುರಿತು.

ಉಲ್ಲೇಖ: 1. ಜಂಟಿ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಭಾರತ ಸರ್ಕಾರ, ಶಾಸ್ತ್ರೀ ಭವನ ನವದೆಹಲಿ ರವರ ಪತ್ರ ದಿ: 11-09-2024 ಮತ್ತು 14-10-2024

2. ನಿರ್ದೇಶಕರು, ವೃತ್ತಿ ಶಿಕ್ಷಣ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ರವರ ಪತ್ರ ಸಂಖ್ಯೆ: 1-13/2024-VE – PART (1) ದಿ:03-12-2024

******

ವಿಷಯಕ್ಕೆ ಸಂಬಂಧಿಸಿದಂತೆ, NCERT ಯು ಶಾಲೆಗಳಲ್ಲಿ 10 Bag less Days ಅನುಷ್ಠಾನಕ್ಕಾಗಿ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಿದೆ. ಮಕ್ಕಳ ಕಲಿಕೆಯನ್ನು ಪ್ರಾಯೋಗಿಕ, ಸಂತೋಷದಾಯಕ, ಅನುಭವಾತ್ಮಕ ಮತ್ತು ಒತ್ತಡ ಮುಕ್ತ ಮಾಡಲು ಈ ಮಾರ್ಗಸೂಚಿಗಳು ಪೂರಕವಾಗಿರುವುದರಿಂದ, ಪ್ರಾದೇಶಿಕ ಭಾಷೆಗೆ ಭಾಷಾಂತರಿಸಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಸದರಿ ಮಾರ್ಗಸೂಚಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಉಲ್ಲೇಖದನ್ವಯ ನಿರ್ದೇಶನವಿರುತ್ತದೆ.

ಈ ಹಿನ್ನೆಲೆಯಲ್ಲಿ ಭಾಷಾಂತರಿಸಿದ Bag less Days ಮಾರ್ಗಸೂಚಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸಿ ಸಲ್ಲಿಸುತ್ತಾ, ಸಂಭ್ರಮ ಶನಿವಾರ ಅನುಷ್ಠಾನ ಕಾರ್ಯಕ್ರಮದಡಿ ಸದರಿ ಮಾರ್ಗಸೂಚಿಯಲ್ಲಿರುವ ಚಟುವಟಿಕೆಗಳನ್ನು ಈಗಾಗಲೇ ಮಾಡುತ್ತಿರುವ ಚಟುವಟಿಕೆಗಳೊಂದಿಗೆ ಅಂತರ್ಗತಗೊಳಿಸಿ ಆಯೋಜಿಸಲು ಸೂಚಿಸಿದೆ ಹಾಗೂ ಮಾಹೆವಾರು ಕಾರ್ಯಕ್ರಮ ಅನುಷ್ಠಾನ ಸಂಬಂಧ ವರದಿಯನ್ನು ಈ ಕಛೇರಿಯ evg.kardsert@gmail.com ಸಲ್ಲಿಸಲು ತಿಳಿಸಿದೆ.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ,
ಬೆಂಗಳೂರು

ರವರಿಗೆ,

1. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ಡಯಟ್ ಹಂತದಲ್ಲಿ ನೋಡಲ್ ಅಧಿಕಾರಿಯನ್ನು ನಿಯೋಜಿಸಿ ಅನುಪಾಲನೆಗೆ ಕ್ರಮವಹಿಸುವುದು.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ.
3. ಉಪನಿರ್ದೇಶಕರು ಆಡಳಿತ ರವರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಶಾಲೆಗಳಿಗೆ ಮಾರ್ಗಸೂಚಿ ತಲುಪಿಸಿ ಯಶಸ್ವಿ ಅನುಷ್ಠಾನಕ್ಕೆ ಕ್ರಮವಹಿಸುವುದು.